# 11. ಜನಸೇವೆ

ಚಿ. ಶ್ರೀ. ಕುಲಕ

ವಸಂತಪುರ ಎಂಬ ಪಟ್ಟಣವಿತ್ತು. ಅಲ್ಲಿ ಧನರಾಜ ಎಂಬ ಖ್ಯಾತ ವಕೀಲರಿದ್ದರು. ಅವರು ತಮ್ಮ ವಾಕ್ ಚಾತುರ್ಯ ಮತ್ತು ಪಾಂಡಿತ್ಯದ ಬಲದಿಂದ ಬಹಳ ಚಿರಪರಿಚಿತರಾಗಿದ್ದರು. ಒಂದು ಸಲ ಅವರ ಆರು ವರ್ಷದ ಮಗ ಪ್ರದೀಪನಿಗೆ ಕಾಯಿಲೆಯಾಯಿತು. ವಕೀಲರು ಮಗುವನ್ನು ಕರೆದುಕೊಂಡು ಡಾ|| ಸುರೇಶ ಎಂಬ ವೈದ್ಯರ ಬಳಿಗೆ ಬಂದರು. ವೈದ್ಯರು ಮಗುವನ್ನು ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿದರು. ಮಗುವಿಗೆ ನಿದ್ರೆಹತ್ತಿತು. ಆಗ ವೈದ್ಯರು ಮತ್ತು ವಕೀಲರು ಲೋಕಾಭಿರಾಮವಾಗಿ ಮಾತನಾಡುತ್ತ ಕುಳಿತರು.

ವೈದ್ಯ - ಏನ್ರೀ ವಕೀಲರೆ, ಇತ್ತಿತ್ತಲಾಗಿ ಮನೆಮನೆಗೆ ಎಲ್.ಎಲ್.ಬಿ ವಕೀಲ ಎಂದು ಬೋರ್ಡು ಹಾಕುತ್ತಾರೆ. ಜನಗಳಿಗೆ ರೊಕ್ಕ ಹೆಚ್ಚಾದಂತೆ ಕಾಣುತ್ತದೆ.

ವಕೀಲ - ರೊಕ್ಕ ಯಾರಿಗೆ ಹೆಚ್ಚಾಗುತ್ತದೆ ? ಈಗಿನ ಕಾಲದಲ್ಲಿ ರೊಕ್ಕವೇ ಮುಖ್ಯ. ಈ ಬೋರ್ಡುಗಳು ಭಾರತೀಯರ ಶಿಕ್ಷಣದ ಮಟ್ಟವನ್ನು ಸೂಚಿಸುತ್ತವೆ.

ವೈದ್ಯ - ವಕೀಲವಾಗಿ ಮಾಡುವುದೇನು? ಡಾಕ್ಟರರಾಗಿದ್ದರೆ ಆರೋಗ್ಯವನ್ನಾದರೂ ಕಾಪಾಡಬಹುದು.

ವಕೀಲ - ವೈದ್ಯರು ಹೆಚ್ಚಾದಂತೆ ರೋಗಗಳೂ ಹೆಚ್ಚಾಗುತ್ತಲೇ ಇವೆ. ಹಿಂದಿನ ಕಾಲದಲ್ಲಿ ರೋಗಗಳೂ ಇರಲಿಲ್ಲ. ವೈದ್ಯರೂ ಇರಲಿಲ್ಲ.

ವೈದ್ಯ - ಹೌದೌದು. ಇಂದು ವಕೀಲರ ಸಂಖ್ಯೆ ಹೆಚ್ಚಾದಂತೆಲ್ಲ ಸಮಾಜದಲ್ಲಿ ಕಲಹ ಕೇಸುಗಳೂ ಹೆಚ್ಚುತ್ತಲೇ ಇವೆ. ಹಿಂದಿನ ಕಾಲದಲ್ಲಿ ಜನರು ಪರಸ್ಪರ ಸ್ನೇಹಭಾವದಿಂದ ಬಾಳುತ್ತಿದ್ದರು. ಆ ಭಾವದಿಂದ ನಡೆದುಕೊಂಡರೆ ನಮ್ಮ ದೇಶವು ಉನ್ನತಮಟ್ಟವನ್ನು ಹೊಂದುವದು.

ವಕೀಲ - ಹೌದು ವೈದ್ಯರೇ. ಆದರೆ ಆ ಸ್ನೇಹಭಾವ ಎಲ್ಲಿಯೂ ಕಂಡುಬರುವುದಿಲ್ಲ.

ವೈದ್ಯ - ನೀವು ಹೇಳುವುದು ನಿಜ ವಕೀಲರೆ, ನಾವು ನಮ್ಮ ರಾಷ್ಟ್ರವನ್ನು ಬಲಪಡಿಸಲು ಹೆಣಗಾಡಬೇಕು. ಧನಪಿಶಾಚಿಯ ಬೆನ್ನು ಹತ್ತಿ ನಾವು ಹಾಳಾಗಿ ಹೋಗಿರುವೆವು.

ವಕೀಲ - ಹೌದು ವೈದ್ಯರೆ, ನಾವಾದರು ಇನ್ನು ಮುಂದೆ ಪವಿತ್ರ ಭಾವನೆಯನ್ನು ಇಟ್ಟುಕೊಂಡು ನಿರಹಂಕಾರ ವೃತ್ತಿಯುಳ್ಳವರಾಗಿ ಜೀವಿಸೋಣ.

ವೈದ್ಯ - ಪುಂಡ-ಪೋಕರಿಗಳ ಕೈಗೆ ಸಿಕ್ಕು ಅದೆಷ್ಟು ಜನ ನಿರಪರಾಧಿಗಳು ಇಂದು ಕಾರಾಗ್ರಹದಲ್ಲಿ ಕೊಳೆಯುತ್ತಿಲ್ಲ. ಅಂಥವರಿಗೆ ನ್ಯಾಯ ದೊರಕಿಸಿಕೊಡಲು ನೀವು ಶತ ಪ್ರಯತ್ನ ಮಾಡಿರಿ.

ವಕೀಲ - ಹೌದು ಡಾಕ್ಟರರೇ, ಇನ್ನು ಮುಂದೆ ಯುವಕರನ್ನು ಜಾಗೃತಗೊಳಿಸಿ ಸಮಾಜದಲ್ಲಿ ಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡಲು ನಾನು ಸದಾ ಯತ್ನಿಸುತ್ತೇನೆ.

ವೈದ್ಯ - ಇದು ನಿತ್ಯ ಸತ್ಯವಾದ ಮಾರ್ಗ. ಸುಶಿಕ್ಷಿತರ ಕರ್ತವ್ಯ.

ವಕೀಲ - ಹೌದು ಡಾಕ್ಟರರೇ, ನಾವು ಹಣಕ್ಕೆ ಆಶೆ ಪಡದೆ, ದುಷ್ಟ ಶಕ್ತಿಗಳಿಗೆ ಹೆದರದೆ, ನ್ಯಾಯ ದೇವತೆಯ ಸೇವೆ ಮಾಡಬೇಕು. ನಾನು ಅದನ್ನು ಮಾಡಿ ತೋರಿಸುತ್ತೇನೆ.

ವೈದ್ಯ - ಆನಂದ! ವಕೀಲರೇ. ಅತೀ ಆನಂದ ನಿಮ್ಮ ನಿರ್ಧಾರವನ್ನು ಕೇಳಿ ನನ್ನ ಮನಸ್ಸಿನಲ್ಲಿಯೂ ವಿದ್ಯುತ್ ಸಂಚಾರವಾದಂತಾಯಿತು.

ವಕೀಲ – ಏನು ಡಾಕ್ಟರರೇ ?

ವೈದ್ಯ – ರೋಗಿಗಳ ಹಿನ್ನೆಲೆಯನ್ನು ಅರ್ಥಮಾಡಿಕೊಂಡು ಅವರಿಗೆ ಉಚಿತವಾದ ಚಿಕಿತ್ಸೆಯನ್ನು ಕೊಡುತ್ತೇನೆ. ಅತೀ ಕಡಿಮೆ ಖರ್ಚಿನಲ್ಲಾಗಲಿ ಅಥವಾ ಸಂಘ ಸಂಸ್ಥೆಗಳ ನೆರವಿನಿಂದಾಗಲಿ, ರೋಗಿಗಳ ರೋಗಗಳನ್ನು ಗುಣಪಡಿಸಲು ಕಾರ್ಯೋನ್ಮುಖನಾಗುತ್ತೇನೆ.

ವಕೀಲ – ಸಂತೋಷ. ಅತೀ ಸಂತೋಷ ಡಾಕ್ಟರರೇ.

ವೈದ್ಯ – ನೀವು ಯುವ ಜನತೆಯಲ್ಲಿ ದೇಶದ ಸ್ಥಿತಿಗತಿ, ಭದ್ರತೆ, ದೇಶಾಭಿಮಾನ, ರಕ್ತದಾನ, ಅಂಗದಾನ ಮುಂತಾದ ವಿಷಯಗಳ ಬಗ್ಗೆ ತಿಳುವಳಿಕೆ ಮೂಡಿಸಿರಿ. ನಾನು ಆ ಶಕ್ತಿಯನ್ನು ದೇಶವಾಸಿಗಳ ಹಿತಕ್ಕಾಗಿ ಬಳಕೆಯಾಗುವಂತೆ ಮಾಡುತ್ತೇನೆ.

ವಕೀಲ – ಆಗಲಿ ಸರ್.

ವೈದ್ಯ – ದೇಶದ ಸುಶಿಕ್ಷಿತರೆಲ್ಲ ಸತ್ಯ ಮಾರ್ಗದಲ್ಲಿ ನಡೆದರೆ ನಮ್ಮ ದೇಶ ಸದೃಢವಾಗಿ ಜಗತ್ತಿನಲ್ಲಿಯೇ ಖ್ಯಾತಿ ಪಡೆಯುತ್ತದೆ.

ವಕೀಲ – ಆಗಲಿ ಡಾಕ್ಟರೆ, ಸುಶಿಕ್ಷಿತರಾದ ನಾವೆಲ್ಲ ಒಗ್ಗಟ್ಟಾಗಿ ದೇಶದ ಪ್ರಗತಿಗಾಗಿ ದುಡಿಯೋಣ.

---

### ಶಬ್ದಗಳ ಅರ್ಥ :

**ವಾಸಿಯಾಗು** – ಗುಣವಾಗು; **ಕುಬೇರ** – ಶ್ರೀಮಂತ; **ಧನಪಿಶಾಚಿ** – ಜಿಪುಣ; **ಜನಾರ್ಧನ** – ದೇವರು

**ಕೃತಿ 1) ಅ) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ವಕೀಲರು ವೈದ್ಯರ ಬಳಿಗೆ ಏಕೆ ಬಂದಿದ್ದರು

2) ಮನೆ ಮನೆಗೆ ಯಾವ ಬೋರ್ಡು ನೇತು ಹಾಕುತ್ತಾರೆ

3) ವಕೀಲರು ಜಗತ್ತು ಹೇಗೆ ಇರುವುದೆಂದು ಹೇಳುವರು

4) ವೈದ್ಯರ ಕರ್ತವ್ಯ ಯಾವುದು

5) ವೈದ್ಯರು ನಾವು ಹೇಗೆ ಜೀವಿಸೋಣವೆಂದು ಹೇಳುತ್ತಾರೆ

**ಬ) ಕೆಳಗೆ ಕಂಸಿನಲ್ಲಿ ಕೊಟ್ಟ ಯೋಗ್ಯ ಪದಗಳನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.**

(ಧನ ಪಿಶಾಚಿ, ಕುಬೇರರೇ, ಮನುಷ್ಯರು, ಸ್ವಜನದ್ರೋಹ, ಜನಾರ್ಧನ, ರೋಗಗಳು)

1) ವೈದ್ಯರೂ -----------------

2) -------------- ಯ ಬೆನ್ನು ಹತ್ತಿ ನಾವು ಹಾಳಾಗಿರುವೆವು.

3) ಮೊದಲಿನ ಕಾಲದಲ್ಲಿ ವೈದ್ಯರಿರಲಿಲ್ಲ ------------- ಇರಲಿಲ್ಲ.

4) ಈಗಿನ ಡಾಕ್ಟರರು ------------- ಸರಿ.

**ಕೃತಿ 2)** **ಕೆಳಗಿನ ಶಬ್ದಜಾಲವನ್ನು ಪೂರ್ಣಗೊಳಿಸಿರಿ.**




**ಕೃತಿ 3)** **ಕೆಳಗಿನ ವಿಷಯದ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.**

ನಾನು ವೈದ್ಯನಾದರೆ -------------

ಅಥವಾ

ನಾನು ವಕೀಲನಾದರೆ ------------

**ಕೃತಿ 4)** **ವೈದ್ಯ , ವಕೀಲ ಇಂತಹ ಇತರ ವೃತ್ತಿಗಳನ್ನು ಕೆಳಗಿನ ಶಬ್ದ ಜಾಲದಲ್ಲಿ ತುಂಬಿರಿ.**




CR7BNE